ಅಸಲು ದಾವಾ ಸಂಖ್ಯೆ - 271/2019
ಪಿಡಬ್ಲ್ಯೂ - 01
ದಿನಾಂಕಃ 06-03-2026
ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ ಶ್ರೀ.ಎನ್ ಎಸ್ ಪಿ ವಕೀಲರಿಂದಃ**

ನಾನು ಈ ಕೆಳಕಂಡ ದಸ್ತಾವೇಜುಗಳನ್ನು ಹಾಜರು ಪಡಿಸಿದ್ದೇನೆ.

ಮಂತ್ರೋಡಿ ಗ್ರಾಮದ ಸರ್ವೆ ನಂ. 104/2ಎ ,104/2ಬಿ ಮತ್ತು 104/2ಕ ಉತಾರಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ- 14 ರಿಂದ 16 ಎಂದು ಗುರುತಿಸಲಾಯಿತು.

ಮಂತ್ರೋಡಿ ಗ್ರಾಮದ ಎಂ ಆರ್ ನಂ. ಟಿ- 66/ 2021-22 ನ್ನು ಹಾಜರುಪಡಿಸಿದ್ದು ಅದನ್ನು ನಿಪಿ- 17 ಎಂದು ಗುರುತಿಸಲಾಯಿತು.

ಆದ್ದರಿಂದ ದಾವೆಯಲ್ಲಿ ಕೋರಿಕೊಂಡಂತೆ ಡಿಕ್ರಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಯು ಎಸ್ ಕೆ ವಕೀಲರಿಂದಃ**

ದಾವೆಯನ್ನು ಯಾವ ಉದ್ದೇಶಕ್ಕಾಗಿ ಹೂಡಿದ್ದೀರಿ ಎಂದರೆ ಪಿತ್ರಾರ್ಜಿತ ಆಸ್ತಿಯಲ್ಲಿ ನನ್ನ ಪಾಲು ಬೇಕು ಎಂದು ಹೂಡಿದ್ದೇನೆ. ಪಿತ್ರಾರ್ಜಿತ ಆಸ್ತಿಗಳು ಒಟ್ಟು ಎಷ್ಟು ಇವೆ ಎಂದರೆ 36 ಎಕರೆ ಇದೆ. ಮುಂದುವರೆದು ದಾವಾ ಆಸ್ತಿಗಳು ಎಲ್ಲವೂ ಪಿತ್ರಾರ್ಜಿತ ಆಸ್ತಿಗಳು ಇರುತ್ತವೆ. ನಿಮ್ಮ ತಂದೆಯವರಿಗೆ ಎಷ್ಟು ಆಸ್ತಿ ಬಂತು ಎಂದು ತೋರಿಸಲು ಯಾವುದಾದರೂ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಯಾವ ರೀತಿಯಲ್ಲಿ ಆಸ್ತಿಯ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಮಾಹಿತಿ ಇಲ್ಲ.

ಸರ್ವೆ ನಂ. 147/2 ರಲ್ಲಿ ಅರ್ಧ ಜಮೀನನ್ನು ಒತ್ತಿ ಹಾಕಿದ್ದೀರಿ ಎಂದರೆ ನನಗೆ ಮಾಹಿತಿ ಇಲ್ಲ. ಈಗಲೂ ಸಹಯಾರಿಗೆ ಒತ್ತಿ (ಲಿಜ್) ಹಾಕಿದ್ದರೋ ಅವರೇ ವಹಿವಾಟು ಮಾಡುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಉಳಿದ ಅರ್ಧ ಜಮೀನು ನಿಮ್ಮ ದೊಡ್ಡಪ್ಪ ಮತ್ತು ಮಕ್ಕಳು ಉಳುಮೆ ಮಾಡುತ್ತಾರೆ ಎಂದರೆ ಇರಬಹುದು, ನಾವು ಅಲ್ಲಿಗೆ ಹೋಗಿರುವುದಿಲ್ಲ. 1 ನೇ ದಾವಾ ಆಸ್ತಿಯು 4 ನೇ ಪ್ರತಿವಾದಿಯು ಉಳುಮೆ ಮಾಡುತ್ತಿದ್ದಾರೆ ಎಂದರೆ ನನಗೆ ಮಾಹಿತಿ ಇಲ್ಲ.

ನೀವು ನಿಮ್ಮ ತಾಯಿ ಕೂಡಿಯೇ ಇದ್ದೀರಿ ಎಂದರೆ ಸರಿ. ನೀವು ಮತ್ತು ನಿಮ್ಮ ತಾಯಿ ಮಾತನಾಡಿಕೊಂಡು ಈ ದಾವೆ ಮಾಡಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಅಜ್ಜನಾದ ಲಿಂಗನಗೌಡ

ರವರು ಒಟ್ಟುಕುಟುಂಬದ ಆಸ್ತಿಯಲ್ಲಿ 3 ಗಂಡು ಮಕ್ಕಳಿಗೆ ತಲಾ 12 ಎಕರೆ ತೆಗೆದುಕೊಳ್ಳಿ ಎಂದು ಹೇಳಿರುತ್ತಾರೆ ಎಂದರೆ ಈ ಕುರಿತು ಯಾವುದೇ ದಾಖಲೆ ಇರುವುದಿಲ್ಲ ಮತ್ತು ನನಗೆ ಗೊತ್ತಿರುವುದಿಲ್ಲ. ಆಪ್ರಕಾರ 3 ಜನರು ಸಹ ಸಾಗುವಳಿ ಮಾಡುತ್ತಾ ಬಂದಿದ್ದಾರೆ ಎಂದರೆ ಸರಿ.

ನಿಮ್ಮ ಒಟ್ಟು ಕುಟುಂಬದ ಎಲ್ಲಾ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಮುಂದುವರೆದು ನಮ್ಮ ತಂದೆಗೆ ಬಂದ ಭಾಗದಲ್ಲಿ ಈ ದಾವೆ ಮಾಡಿರುತ್ತೇವೆ. ನಿಮ್ಮ ಅಜ್ಜನವರಿಗೆ ಎಷ್ಟು ಜನ ಮಕ್ಕಳು ಎಂದರೆ, 3 ಜನ ಗಂಡು ಮಕ್ಕಳು, ಇಬ್ಬರು ಹೆಣ್ಣು ಮಕ್ಕಳು. ಹೆಣ್ಣುಮಕ್ಕಳನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಮುಂದುವರೆದು ಈ ಮೊದಲೇ ನಮ್ಮ ಅಜ್ಜನವರು ಅವರಿಗೆ ಪಾಲು ನೀಡಿದ್ದಾರೆ. ಅವರಿಗೆ ಜಮೀನು ನೀಡಿದರೋ ಇಲ್ಲವೋ ಎಂದರೆ ಅವರಿಗೆ ಜಮೀನು ನೀಡಿರುವುದಿಲ್ಲ ದುಡ್ಡನ್ನು ನೀಡಿರುತ್ತಾರೆ. ಈ ಕುರಿತು ಯಾವುದಾದರೂ ದಾಖಲೆಯನ್ನು ಹಾಜರುಪಡಿಸಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಸದರಿ ದಾಖಲೆಯನ್ನು ಹಾಜರು ಮಾಡಲು ತೊಂದರೆ ಇದೆಯಾ ಎಂದರೆ ನಾನು ವಿಚಾರ ಮಾಡುತ್ತೇನೆ. ನೀವು ಎಷ್ಟು ಎಕರೆ ಉಳುಮೆ ಮಾಡುತ್ತೀರಿ ಎಂದರೆ ದಾವೆ ಹೂಡಿದಾಗಿನಿಂದ ಯಾವುದೇಉಳುಮೆ ಮಾಡುತ್ತಿಲ್ಲ. ನೀವು ವಂಶಾವಳಿಯನ್ನು ಮತ್ತು ದಾವಾ ಆಸ್ತಿಗಳನ್ನು ತಪ್ಪಾಗಿ ತೋರಿಸಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಒಟ್ಟು ಕುಟುಂಬದ ಆಸ್ತಿಗಳು ಯಾವ ರೀತಿಯಲ್ಲಿ ಪಾಲು ವಿಭಾಗ ಆಗಿರುತ್ತದೆ ಎಂದು ಹೇಳುತ್ತೀರಿ ಎಂದರೆ ನಮ್ಮ ಅಜ್ಜನವರು ಖರೀದಿ ಮಾಡುವ ವೇಳೆಯಲ್ಲಿಯೇ ಕೆಲವು ಆಸ್ತಿಗಳು ಅವರವರ ಹೆಸರಿನಲ್ಲಿ ಮಾಡಿದ್ದರು. ಇನ್ನೂ ಉಳಿದ ಆಸ್ತಿಗಳನ್ನು ಅವರೇ ಹಂಚಿರುತ್ತಾರೆ. ನಿಮ್ಮ ಅಜ್ಜನವರು ಆಸ್ತಿಗಳನ್ನು ಹಂಚಿದರು ಎಂದು ತೋರಿಸಲು ಯಾವುದಾದರೂ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಮುಂದುವರೆದು ಉತಾರ ಹಾಜರುಪಡಿಸಿದ್ದೇನೆ. ಸುಮಾರು 8-10 ವರ್ಷದ ಹಿಂದೆ ನಿಮ್ಮ ತಂದೆಯವರನ್ನು 4 ನೇ ಪ್ರತಿವಾದಿಯು ಆಸ್ಪತ್ರೆಗೆ ಕರೆದುಕೊಂಡು ಹೋಗುವುದು ಮತ್ತು ಚಿಕಿತ್ಸೆ ಕೊಡಿಸುವುದು ಮಾಡುತ್ತಿದ್ದರು ಎಂದರೆ ನಮ್ಮ ತಂದೆಯವರು ಸಾಯುವ ಕೊನೆಯ ವಾರದಲ್ಲಿ ಮಾತ್ರ ಅವರು ಮಾಡಿರುತ್ತಾರೆ.

ನಿಮ್ಮ ತಂದೆಯವರು ಆರೋಗ್ಯವಾಗಿದ್ದಾಗ ಶಿಗ್ಗಾಂವದಲ್ಲಿ ವಾಸವಾಗಿದ್ದರು ಎಂದರೆ ಸರಿ. ಶಿಗ್ಗಾಂವದಲ್ಲಿ ಸಹ ನಿಮ್ಮ ತಂದೆಯವರು ಒಟ್ಟು ಕುಟುಂಬದಲ್ಲಿ 2 ಗುಂಟೆ ಆಸ್ತಿಯನ್ನು ಖರೀದಿ ಮಾಡಿದ್ದರು ಎಂದರೆ ಸರಿಯಲ್ಲ. ಅದರಲ್ಲಿ ಮನೆಯನ್ನು ಸಹ ಕಟ್ಟಿರುತ್ತೀರಿ ಎಂದರೆ ಸರಿಯಲ್ಲ. ನಿಮ್ಮ ತಂದೆಯವರ ಆರೋಗ್ಯ ಹದಗೆಟ್ಟಿರುವಾಗ ಅವರು ಹಿರೇಮಲ್ಲೂರ ಗ್ರಾಮದಲ್ಲಿ ಇದ್ದರು ಎಂದರೆ ಸಾಯುವ ಕೊನೆಯ ವಾರದಲ್ಲಿ ಇದ್ದರು. ಅವರು ಆರೋಗ್ಯ ವಾಗಿದ್ದಾಗ ಶಿಗ್ಗಾಂವ ಗ್ರಾಮದಲ್ಲೂ ಮತ್ತು ಹಿರೇಮಲ್ಲೂರ ಗ್ರಾಮದಲ್ಲಿ ಹೋಗಿ ಬರುವುದನ್ನು ಮಾಡುತ್ತಿದ್ದರು

ಎಂದರೆ ಸರಿ. ನಿಮ್ಮ ತಂದೆ ವಕೀಲರು ಎಂದರೆ ಸರಿ. ನಿಮ್ಮ ತಂದೆಯವರು ಅವರ ಅಣ್ಣ ತಮ್ಮಂದಿರ ಜೊತೆ ಚೆನ್ನಾಗಿ ಇದ್ದರು ಎಂದರೆ ಸರಿಯಲ್ಲ. ಮುಂದುವರೆದು ಅವರು ಸಾಯುವ ಕೊನೆಯ ವೇಳೆಯಲ್ಲಿ ಅವರ ಅಣ್ಣ ತಮ್ಮಂದಿರು ಸಹಾಯ ಮಾಡಿರುತ್ತಾರೆ. 2-3 ವರ್ಷದ ಹಿಂದೆ ನಿಮ್ಮ ತಂದೆಯವರು ತೀರಿಕೊಂಡಾಗ ಅವರ ಅಂತ್ಯಕ್ರಿಯೆಯನ್ನು 4 ನೇ ಪ್ರತಿವಾದಿಯೇ ಮಾಡಿರುತ್ತಾರೆ ಎಂದರೆ ಸರಿಯಲ್ಲ.

**ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಸವಣೂರು